ಶ್ರೀ ಜೆ. ಹೆಚ್. ಪಟೇಲ್.—ನ್ಯಾಯಾಂಗ ತನಿಖೆಯ ಅವಶ್ಯಕತೆ ಇಲ್ಲ. ಈಗಾಗಲೇ ಯಾರು ಪುಷ್ಪ ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು. ಅದು ಸರ್ಕಾರಿ ಜಮೀನು. ಕೆ. ಪಿ. ಸಿ. ಯವರದ್ದು ಆ ಜಮೀನು. ಎಂ. ಪಿ. ಎಂ. ನವರು ಆಫಾರ್‌ಸ್ಟೇಷನ್ ಸ್ಕೀಮ್‌ನಲ್ಲಿ ಅಲ್ಲಿ ಕೆಲಸ ನಡೆಯುತ್ತಿದೆ. ಅವರು ಕೆಲಸ ಮಾಡತಕ್ಕಂತಹ ಸಮಯದಲ್ಲಿ ಕ್ಲಾಷ್ ಆಗಿದೆ. ಫಾರೆಸ್ಟ್ ಆಫೀಸರ್ಸ್‌ಗಳು ಡ್ಯೂಟಿಯ ಮೇಲೆ ಇದ್ದಾರೆ. ಈ ವಿಷಯದಲ್ಲಿ ಘರ್ಷಣೆಯಾಗಿದೆ. ಅಲ್ಲಿರತಕ್ಕ ರೈತರೂ ಕೂಡ ನಮಗೆ ಬಹಳ ಬೇಕಾದವರು. ನಾನೂ ಕೂಡಾ ಗಲಾಟೆ ಬೇಡ ಎಂದು ಸಮಾಧಾನ ಮಾಡಿದ್ದೇನೆ. ಯಾವುದೋ ಕಾರಣಕ್ಕೋಸ್ಕರ ಜಮೀನು ಬೇಕೆನ್ನುವುದಕ್ಕೋಸ್ಕರವಾಗಿ ಗಿಡ ನೆಡಬೇಡಿ ಎಂದು ಅವರು ಹೋಗಿದ್ದಾರೆ. ಸರ್ಕಾರಿ ಆಜ್ಞೆ ಇದೆ ಎಂದು ಇವರು ಹೋಗಿದ್ದಾರೆ. ನಾನು ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಶಾಂತಿಯುತವಾಗಿ ನಾವು ಇದನ್ನು ಸೆಟಲ್ ಮಾಡಿದ್ದೇವೆ. ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಿದ್ದೇವೆ. ತನಿಖೆ ಏಕೆ ಮಾಡಬೇಕು ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ನಿರ್ದಿಷ್ಟ ಕಾರಣಕ್ಕೋಸ್ಕರ ಜಮೀನು ಬೇಡದಿದ್ದರೆ ಆ ಜಾಗವನ್ನು ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ವಾಪಸ್ ಕೊಡಬೇಕೇ ಹೊರತು ಎಂ. ಪಿ. ಎಂ. ಗೆ ಏಕೆ ಕೊಡುತ್ತೀರಿ ?

ಶ್ರೀ ಜೆ. ಹೆಚ್. ಪಟೇಟ್.—ಅಲ್ಲಿ ಎಲ್ಲವೂ ಕಾನೂನು ಬದ್ಧವಾಗೇ ನಡೆದಿದೆ. ಅಲ್ಲಿ ಅಕ್ರಮ ನಡೆದಿಲ್ಲ. ಅಲ್ಲಿ ಇನ್‌ವಾಲ್ಸ್ ಆಗಿರುವ ರೈತರೂ ನನಗೆ ಚೆನ್ನಾಗಿ ಗೊತ್ತಿದೆ. ಅಲ್ಲಿ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಆದ್ದರಿಂದ ಮುಂದೆ ತನಿಖೆ ಮಾಡುವ ಅವಶ್ಯಕತೆ ಇಲ್ಲ.

ಆನೆಗಳ ಹತ್ಯೆ

೭೧(೨೨೫) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದ ಅರಣ್ಯಗಳಲ್ಲಿ ಇದುವರೆವಿಗೆ ಕೊಂದಿರುವ ಆನೆಗಳ ಸಂಖ್ಯೆ ಎಷ್ಟು ?

ಆ) ಆನೆಗಳನ್ನು ಕೊಂದ ಬಗ್ಗೆ ಎಷ್ಟು ಮಂದಿಯನ್ನು ಇದುವರೆವಿಗೆ ಹಿಡಿಯಲಾಗಿದೆ; ಹಾಗೂ ದಂತಗಳನ್ನು ವಶಪಡಿಸಿಕೊಳ್ಳಲಾಗಿದೆ ?

ಇ) ಆನೆಗಳ ಹತ್ಯೆಯನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜಿ. ಎಸ್. ಬಾಗಲ ಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ೧೯೮೦-೮೧ ರಿಂದ ಈವರೆವಿಗೆ ವರ್ತ್ತಿ ಪಚ್ಚಲಾದ ಆನೆ ಹತ್ಯ ಪ್ರಕರಣಗಳು ಕೆಳಕಂಡಂತಿವೆ:—

೧೯೮೦-೮೧	—	೧೩ ಪ್ರಕರಣಗಳು.
೧೯೮೧-೮೩	—	೧೨ ,,
೧೯೮೨-೮೩	—	೨೫ ,,
೧೯೮೩-೮೪	—	೨೬ ,,
೧೯೮೪-೮೫	—	೬ ,,
೧೯೮೫-೮೬	—	೧೫ ,,
೧೯೮೬-೮೭	—	೧೧ ,,
೧೯೮೭-೮೮ (ಆಗಸ್ಟ್ ೮೭ ರವರೆಗೆ)	—	೨ ,,
		೧೧೦ ಪ್ರಕರಣಗಳು.

ಆ) ೨೯ ಮಂದಿಯನ್ನು ಇದುವರೆಗೆ ಹಿಡಿಯಲಾಗಿದೆ. ೨೭ ದಂತಗಳನ್ನು ಮಡಕೇರಿ ವೃತ್ತದವರು ವಶಪಡಿಸಿಕೊಳ್ಳಲಾಗಿದೆ (೧೭೪.೬ ಕೆ. ಜಿ.) ೨೧೬ ಕೆ. ಜಿ. ದಂತವನ್ನು ಮೈಸೂರು ವೃತ್ತದಲ್ಲಿ ವಶಪಡಿಸಿಕೊಳ್ಳಲಾಗಿದೆ (೧೧ ಆನೆಗಳಿಂದ ೨೨ ದಂತಗಳು).

ಇ) ಆನೆಗಳ ಹತ್ಯೆ ಘಟನೆಗಳ ಹಿನ್ನೆಲೆಯಲ್ಲಿ ಇವುಗಳ ಹತೋಟಿಗೆ ೧೯೮೩–೮೪ ರಿಂದ ಸರ್ಕಾರವು ಹಲವಾರುಪ್ರತಿಬಂಧಕ ಕ್ರಮಗಳನ್ನು ಕೈಗೊಂಡಿದೆ. ತುರ್ತು ಸಂದೇಶದ ಸಂಪರ್ಕ ಗಳಿಗಾಗಿ ೩೫ ನಿಸ್ತಂತು ಜಾಲವನ್ನು ಅಳವಡಿಸಲಾಗಿದೆ ಶೀಘ್ರ ಓಡಾಟಕ್ಕಾಗಿ ಗಡಿ ಪ್ರದೇಶದ ಅಧಿಕಾರಿಗಳಿಗೆ ೧೩ ಜೀಪುಗಳನ್ನು ಒದಗಿಸಲಾಗಿದೆ. ಮತ್ತು ಸೂಕ್ಷ್ಮ ಪ್ರದೇಶದಲ್ಲಿ ಕೆಲಸ ಮಾಡುವ ಅರಣ್ಯ ಸಿಬ್ಬಂದಿಗೆ ಕರ್ತವ್ಯ ನಿರ್ವಹಿಸಲು ಅವರ ಆತ್ಮರಕ್ಷಣೆಗೆ ಹಾಗೂ ಹಂತಕರನ್ನು ಎದುರಿಸಲು ಅವರಿಗೆ ೧೧೭ ಡಿಬಿಬಿಎಲ್ ಬಂದೂಕ ಹಾಗೂ ಮದ್ದು ಗುಂಡುಗಳನ್ನು ಸರಬರಾಜು ಮಾಡಲಾಗಿದೆ. ರಾಜ್ಯಗಳ ಗಡಿ ಪ್ರದೇಶ ಅರಣ್ಯ ಹಾಗೂ ಆರಕ್ಷಕ ಅಧಿಕಾರಿಗಳು ಆಗಾಗ್ಗೆ ಸಂಧಿಸಿ ಆನೆಗಳ ಹತ್ಯೆಯನ್ನು ತಡೆಯುವ ಬಗ್ಗೆ ಉಪಾಯ ಮತ್ತು ಕ್ರಮಗಳನ್ನು ಚರ್ಚಿಸುತ್ತಿರುತ್ತಾರೆ. ಕ್ಷೇತ್ರೀಯ ಸಿಬ್ಬಂದಿ ಗಳಿಗಾಗಿ ವಾಕಿ–ಟಾಕಿ ಯಂತ್ರಗಳ ಖರೀದಿಗೆ ಸಂಬಂಧಪಟ್ಟವರಿಗೆ ಸರಬರಾಜು ಮಾಡಲು ಕೇಳಿ ಕೊಳ್ಳಲಾಗಿದೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ೧೯೮೪–೮೫ರಲ್ಲಿ ೬, ೧೯೮೫–೮೬ ರಲ್ಲಿ ೧೫, ೧೯೮೬–೮೭ ರಲ್ಲಿ ೧೧ ಆನೆ ಹತ್ಯೆ ಪ್ರಕರಣಗಳು ಜರುಗಿವೆ. ಇದನ್ನು ನೋಡಿದರೆ ಅರಣ್ಯ ಅಧಿಕಾರಿಗಳ ಕರ್ತವ್ಯಲೋಪವಾಗಿದೆ ಎಂಬುದು ಮುಖ್ಯ ಕಾರಣ. ಇದರ ಬಗ್ಗೆ ಅರಣ್ಯ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ ? ತಾವು ರಾಜ್ಯದಲ್ಲಿ ೧೯೮೦–೮೧ ರಿಂದ ಇಲ್ಲಿಯವರೆಗೆ ಆದ ಆನೆ ಹತ್ಯೆ ಪ್ರಕರಣಗಳ ವಿವರಣೆ ಕೊಟ್ಟಿದ್ದೀರಿ. ರಾಜ್ಯದಲ್ಲಿ ಒಟ್ಟು ಎಷ್ಟು ಅಭಯಾರಣ್ಯಗಳು ಇವೆ ಹಾಗೂ ಯಾವ ಯಾವ ಅರಣ್ಯದಲ್ಲಿ ಎಷ್ಟೆಷ್ಟು ಆನೆಗಳು ಕೊಲ್ಲಲ್ಪಟ್ಟಿವೆ ಎಂಬ ಬಗ್ಗೆ ವಿವರ ಕೊಡುತ್ತೀರಾ ?

ಶ್ರೀ ಜಿ. ಎಸ್. ಬಾಗಲಕೋಟಿ.—ಅಧ್ಯಕ್ಷರೇ, ಆನೆ ಹತ್ಯೆಗೆ ಅನೇಕ ಕಾರಣಗಳು ಇವೆ. ಇದರಲ್ಲಿ ಅರಣ್ಯ ಅಧಿಕಾರಿಯ ಯಾವುದೇ ರೀತಿಯ ನಿರ್ಲಕ್ಷ್ಯದ ಕಾರಣಗಳು ಕಂಡುಬಂದಿಲ್ಲ. ಆದುದರಿಂದ ಅರಣ್ಯ ಅಧಿಕಾರಿಗಳ ಮೇಲೆ ಯಾವುದೇ ಕ್ರಮ ಜರುಗಿಸಿಲ್ಲ. ಎರಡನೆಯದಾಗಿ, ಎಷ್ಟು ಅಭಯಾರಣ್ಯಗಳು ಇವೆ ಎನ್ನುವುದರ ಬಗ್ಗೆ ನಾನು ಪಟ್ಟಿಯನ್ನು ಒದಗಿಸಿ ಕೊಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮಡಕೇರಿ ವೃತ್ತದವರು ೨೭ ದಂತಗಳನ್ನು ವಶಪಡಿಸಿಕೊಂಡಿದ್ದಾರೆ ಇದರ ತೂಕ ೧೭೪.೬ ಕೆ. ಜಿ. ಮೈಸೂರು ವೃತ್ತದಲ್ಲಿ ೨೧೬ ಕೆ.ಜಿ. ತೂಕದ ೨೨ ದಂತಗಳನ್ನು ವಶಪಡಿಸಿ ಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಹೀಗೆ ವಶಪಡಿಸಿಕೊಂಡ ದಂತದ ಬೆಲೆ ಎಷ್ಟು ? ಆಮೇಲೆ ೨೯ ಮಂದಿಯನ್ನು ಇದುವರೆಗೆ ಹಿಡಿಯಲಾಗಿದೆ ಎಂದು ಹೇಳುತ್ತೀರಿ. ಇವರಲ್ಲಿ ಎಷ್ಟು ಮಂದಿಗೆ ಶಿಕ್ಷೆಯಾಗಿದೆ ?

ಶ್ರೀ ಜಿ. ಎಸ್. ಬಾಗಲಕೋಟಿ.—ವಿವರಗಳನ್ನು ನಾನು ಕಳಿಸಿಕೊಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಇಲ್ಲಿ ಕ್ಷೇತ್ರೀಯ ಸಿಬ್ಬಂದಿಗಳಿಗಾಗಿ ವಾಕಿ-ಟಾಕಿ ಯಂತ್ರಗಳನ್ನು ಸರಬರಾಜು ಮಾಡಲು ಸಂಬಂದಪಟ್ಟವರಿಗೆ ಕೇಳಿಕೊಳ್ಳಲಾಗಿದೆ ಎಂದು ಹೇಳಿದ್ದೀರಿ, ಅಂದರೆ ಇನ್ನೂ ಸರಬರಾಜು ಆಗಿಲ್ಲವೆಂದಾಯಿತು. ಇನ್ನೂ ಎಷ್ಟು ಆನೆಗಳು ಸತ್ತಮೇಲೆ ವಾಕಿ-ಟಾಕಿ ಯಂತ್ರ ಗಳನ್ನು ಸರಬರಾಜು ಮಾಡುತ್ತೀರಾ ?

ಶ್ರೀ ಜಿ ಎಸ್. ಬಾಗಲಕೋಟಿ.—ಸನ್ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಈ ಬಗ್ಗೆ ನಾವು ೧೯೮೭-೮೮ರ ಸಾಲಿಗೆ ೪೦ ವಾಕಿ-ಟಾಕಿ ಯಂತ್ರಗಳೂ, ೩೧೫ರ ೮೦ ಬಂದೂಕುಗಳು ಮತ್ತು ೫ ಜೀಪುಗಳನ್ನು ಖರೀದಿಸಲು ಈಗಾಗಲೇ ಆದೇಶವನ್ನು ಹೊರಡಿಸಿದ್ದೇವೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ಇನ್ನೊಂದು ಪ್ರಶ್ನೆ ಇದೆ.

ಅಧ್ಯಕ್ಷರು.—ಎಷ್ಟು ಕೇಳುತ್ತೀರಿ ? ಈಗಾಗಲೇ ಮೂರು ಸಲ ಕೇಳಿದ್ದೀರಿ.

ಶ್ರೀ ವೇದಾಂತ ಹೆಮ್ಮಿಗೆ —ಅರಣ್ಯ ಇಲಾಖೆಯವರು ಬಂದೂಕುಗಳನ್ನು ಕೊಟ್ಟಿದ್ದಾರೆ. ಈ ಬಂದೂಕಗಳನ್ನು ಕೊಡುವ ಉದ್ದೇಶ ಏನಂದರೆ ಆನೆಗಳನ್ನು ಕೊಲೆ ಮಾಡುವಂಥ ಜನರು ಯಾರಿದ್ದಾರೆ, ಅವರ ಮೇಲೆ ಗುಂಡು ಹಾರಿಸುವುದಕ್ಕೆ ಆನೆಗಳನ್ನು ಕೊಲ್ಲುವುದಕ್ಕೆ ಬರುವ ಬೇರೆ ಜನರಮೇಲೆ ಎಷ್ಟು ಬಾರಿ ಇವರು ಗುಂಡು ಹಾರಿಸಿದ್ದಾರೆ ?

ಶ್ರೀ ಜಿ. ಎಸ್. ಬಾಗಲೆಕೋಟಿ.—ನನ್ನ ಕಡೆ ವಿವರಗಳು ಇಲ್ಲಿ ಅದನ್ನು ಕಳಿಸಿಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿದಿದ್ದರೂ ನಾನು ಎಲ್ಲರಿಗೂ ಅವಕಾಶ ಮಾಡಿಕೊಂಡು ತ್ತಿದ್ದೇನೆ. ಒಬ್ಬರು ಎರಡು ಉಪಪ್ರಶ್ನೆಗಳನ್ನು ಮಾತ್ರ ಕೇಳಬೇಕು. ಮುಂದಿನ ಪ್ರಶ್ನೆಯನ್ನು ಶ್ರೀ ಗೋವಿಂದಗೌಡ ಅವರು ಕೇಳಿ.

ಕೊಪ್ಪ ನರಸಿಂಹರಾಜಪುರ ಮತ್ತು ಶೃಂಗೇರಿಗಳಿಗೆ ವಿದ್ಯುಚ್ಛಕ್ತಿ ಕಾಂಕ್ರೀಟ್ ಕಂಬಗಳನ್ನು ನೆಡುವ ಬಗ್ಗೆ

೭೨ (೨೬೧) ಶ್ರೀ ಹೆಚ್. ಜಿ. ಗೋವಿಂದೇಗೌಡ (ಶೃಂಗೇರಿ).—ಮಾನ್ಯ ಭಾರಿ ಕಾಗೂ ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್‌ಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕೊಪ್ಪ, ನರಸಿಂಹರಾಜಪುರ ಹಾಗೂ ಶೃಂಗೇರಿ ತಾಲ್ಲೂಕುಗಳಲ್ಲಿ ಈ ಹಿಂದೆ ವಿದ್ಯುತ್ ಸರಬರಾಜಿಗಾಗಿ ಹಾಕಿದ ಮರದ ಕಂಬಗಳು ಮಳೆಯಿಂದ ಗೆದ್ದಲು ಹಿಡಿದು ವಿದ್ಯುತ್ ಸರಬರಾಜು ಸಮರ್ಪಕವಾಗಿ ಆಗದೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಏನು ಕ್ರಮ ಕೈಗೊಳ್ಳಲಾಗಿದೆ. ಹಾಗೂ ಈ ಉದ್ದೇಶಕ್ಕಾಗಿ ಕಾಂಕ್ರೀಟ್ ಕಂಬಗಳನ್ನು ಸರಬರಾಜು ಮಾಡಲಾಗುವುದೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ)—ಆ) ಕೊಪ್ಪ, ನರಸಿಂಹರಾಜಪುರ, ಶೃಂಗೇರಿ ತಾಲ್ಲೂಕುಗಳಲ್ಲಿ ಬದಲಾಯಿಸ ಬೇಕಾಗಿರುವ ಒಟ್ಟು ಮತ್ತು ೧೯೮೦ ಮರದ ಕಂಬಗಳನ್ನು ಗುರುತಿಸಿದ್ದು ಇಲ್ಲಿವರೆಗೆ ೧೦೧೪ ಕಂಬಗಳ ಬದಲಾವಣೆಗೆ ಅಂದಾಜುಗಳು ಮಂಜೂರಾಗಿವೆ. ೧-೪-೮೫ ರಿಂದ ೩೧-೭-೮೭ರ ವರೆಗೆ ಒಟ್ಟು ೬೨೨ ಕಂಬಗಳನ್ನು ಬದಲಾಯಿಸಲಾಗಿದೆ. ಕೆಲಸವು ಪ್ರಗತಿಯಲ್ಲಿದೆ. ಈ ಕೆಲಸವನ್ನು ಹಂತ ಹಂತವಾಗಿ ಮಾಡಿ ಮುಗಿಸಲಾಗುತ್ತಿದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಸ್ವಾಮಿ. ಕೊಪ್ಪ ನರಸಿಂಹರಾಜಪುರ ಮತ್ತು ಶೃಂಗೇರಿ ಮಲೆನಾಡು ಪ್ರದೇಶದಲ್ಲಿವೆ. ಇದರ ಬಗ್ಗೆ ನಾನು ತಮಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ಒಹುಶಃ ಈ ಕಂಬಗಳು ಕಾಡಿನಲ್ಲೇ ಹಾಕಿರತಕ್ಕದ್ದು. ಹೆಚ್ಚು ಮಳೆಬೀಳತಕ್ಕಂಥ ಪ್ರದೇಶದಲ್ಲಿ ಹಾಕಿರ ತಕ್ಕದ್ದಾಗಿದೆ. ಒಟ್ಟು ೧೯೮೦ ಕಂಬಗಳ ಪೈಕಿ ಬರೇ ೬೨೨ ಕಂಬಗಳನ್ನು ರಿಪ್ಲೇಸ್ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಇನ್ನೂ ೧೩೭೮ ಕಂಬಗಳನ್ನು ರಿಪ್ಲೇಸ್ ಮಾಡಬೇಕಾಗಿದೆ. ಈ ಕಂಬಗಳು ಮರದ ಕಂಬಗಳಾಗಿದ್ದು ಗೆದ್ದಲು ಹಿಡಿದಿರುತ್ತವೆ. ಆದ್ದರಿಂದ ಇವುಗಳು ಪರ್ಮನೆಂಟಾಗಿ ಇರ ಬೇಕಾದರೆ ಆರ್.ಸಿ.ಸಿ. ಕಂಬಗಳನ್ನು ಇವುಗಳ ಬದಲಾಗಿ ಹಾಕಬೇಕು. ಹೀಗೆ ಮಾಡದೇ ಇದ್ದರೆ ಅನೇಕ ದಿವಸಗಳ ಕಾಲ ಎಲೆಕ್ಟ್ರಿಸಿಟಿ ಇಲ್ಲದೆ ತೊಂದರೆಯಾಗುತ್ತಿರುವುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಆಮೇಲೆ ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ಈ ಮೂರು ತಾಲ್ಲೂಕು ಗಳಿಗೆ ಒಂದೇ ಸಬ್‌ಡಿವಿಜನ್ ಇದೆ. ಒಂದು ಹಳೆ ಲಾರಿ, ೧೨ ಜನ ಮನೆಗಳು ಇರತಕ್ಕದ್ದು ಇದೆ. ಮೂರು ತಾಲ್ಲೂಕುಗಳ ಮೇಲ್ವಿಚಾರಣೆ ಜವಾಬ್ದಾರಿ ಈ ಸಬ್ ಡಿವಿಜನ್ ಮೇಲೆ ಬಿದ್ದಿರತಕ್ಕದ್ದು ಇದೆ. ಇಷ್ಟು ಮಂದಗತಿಯಲ್ಲಿ ರಿಪ್ಲೇಸ್‌ನ್ನು ಮಾಡಿದರೆ ನಾವು ಜನರಿಗೆ ಉತ್ತರ ಹೇಳುವುದು ಕಷ್ಟವಾಗುತ್ತದೆ. ಆದಷ್ಟು ಬೇಗ ಕಂಬಗಳನ್ನು ಒದಗಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಆಗಬಹುದು.

ಎನ್.ಜಿ.ಇ.ಎಫ್.ನ ಪೂರಕ ಘಟಕಗಳನ್ನು ಇತರರಿಗೆ ಹಂಚಿರುವ ಬಗ್ಗೆ

೭೪ (೩೧೬) ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಎನ್.ಜಿ.ಇ.ಎಫ್.ನ ಪೂರಕ ಘಟಕಗಳನ್ನು ಸಚಿವರ ಮತ್ತು ಶಾಸಕರ ಸಂಬಂಧಿಗಳಿಗೆ ಹಂಚಲಾಗಿದೆ ಎಂಬುದು ವಾಸ್ತವಾಂಶವೇ ?